# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.36/2014**

**ದೋ.ಸಾ. : 28 ಫ್ರಾ.ಸಾ. : 05**

**ದಿನಾಂಕಃ 03-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

3. ನಾನು ಪೊಲೀಸರ ಮುಂದೆ ಯಾವುದೇ ಬರವಣಿಗೆ ಮೂಲಕ ಹೇಳಿಕೆ ನೀಡಿಲ್ಲ, ಆದರೆ ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತೇನೆ. ದಿಃ18-02-2014 ರಂದು ಬೆಳಿಗ್ಗೆ ಆರೋಪಿಯನ್ನು ಪೊಲೀಸರು ಹಿಡಿದುಕೊಂಡು ಬಂದಿದ್ದಾರೆ ಎಂಬ ವಿಷಯ ತಿಳಿದು, ನಾನು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನಾನು ಪೊಲೀಸ್ ಠಾಣೆಗೆ ಹೋಗಿ, ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿರುತ್ತೇನೆ. ಅಲ್ಲಿ ನೆರದಿದ್ದ ಜನರಿಂದ ಹಾಗೂ ಪೊಲೀಸರಿಂದ "ಆರೋಪಿಯು ವೇಲು ಇಲ್ಲನ್ ಗುಡಿಯ ಮನೆಯಲ್ಲಿ ರೂ.45,000/-ಗಳ ಹಣವನ್ನು ಕಳ್ಳತನ ಮಾಡಿ, ಆ ಹಣದ ಪೈಕಿ ರೂ.37,000/- ಗಳನ್ನು ಮರಳಿ ಅವರ ಮನೆಯಲ್ಲಿಯೇ ಇಟ್ಟಿದ್ದು, ಬಾಕಿ ಹಣವನ್ನು ವಾಪಸು ಕೊಡುವಂತೆ ಮೃತ ವೇಲು ಆರೋಪಿಗೆ ಕೇಳಿರುತ್ತಾನೆ ಹಾಗೂ ಬಾಕಿ ಹಣವನ್ನು ವಾಪಸು ಕೊಡದೆ ಇದ್ದರೆ ಪೊಲೀಸ್ ಠಾಣೆಗೆ ದೂರು ನೀಡುವುದಾಗಿ, ವೇಲು ಇಲ್ಲನ್ ಗುಡಿ ಹೇಳಿದ್ದು, ಅದೇ ಸಿಟ್ಟಿನಿಂದ ಆರೋಪಿಯು ವೇಲು ಇಲ್ಲನ್ ಗುಡಿ, ಆತನ ಮಕ್ಕಳಾದ ಸತ್ಯ ನಾರಾಯಣ ಮೂರ್ತಿ ಮತ್ತು ಅಶ್ವಿನಿಯವರಿಗೆ ಕತ್ತಿಯಿಂದ ಹೊಡೆದು ಕೊಲೆ ಮಾಡಿರುತ್ತಾನೆ ಹಾಗೂ ವೇಲು ಇಲ್ಲನ್ ಗುಡಿಯ ಹೆಂಡತಿ ಜಾನಕಿಗೆ ಅದೇ ಕತ್ತಿಯಿಂದ, ಆಕೆಯ ಕೈ ಕಡಿದಿರುತ್ತಾನೆ ಹಾಗೂ ತಲೆಗೂ ಸಹ ಹೊಡೆದಿರುತ್ತಾನೆ" ಎಂಬ ವಿಷಯ ತಿಳಿದು ಬಂತು. ಈ ಬಗ್ಗೆ ನಾನು ಪೊಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ವೇಲು ಇಲ್ಲನ್ ಗುಡಿಯ ಶವದ ಪಕ್ಕದಲ್ಲಿ ಬಿದ್ದಿದ್ದ, ಆತನ ಊರುಗೋಲನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-13 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

4. ಚಾಸಾ–27 ರವರ ಮನೆಯ ಪಕ್ಕದಲ್ಲಿ ಚಾಸಾ–24 ರವರ ಮನೆ ಇರುತ್ತದೆ ಎಂದರೆ ಸಾಕ್ಷಿಯು ಅವರಿಬ್ಬರ ಮನೆಯ ಮಧ್ಯದಲ್ಲಿ ಮೃತ ವೇಲು ರವರ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಚಾಸಾ–24 ರವರ ಮನೆಯ ಬಾಗಿಲು ಉತ್ತರ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಮೃತ ವೇಲು ರವರ ಮನೆ ಬಾಗಿಲು ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಚಾಸಾ–27 ರವರ ಮನೆಯ ಬಾಗಿಲು ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಚಾಸಾ–27 ಮತ್ತು ಮೃತ ವೇಲು ರವರ ಮನೆಯ ನಡುವೆ ಭೋಗರಾಜ ಎನ್ನುವರ ಮನೆ ಇರುತ್ತದೆ ಎಂದರೆ ಸಾಕ್ಷಿಯು ಸೈಡಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಭೋಗರಾಜ ರವರ ಮನೆಯ ಬಲಗಡೆಗೆ ಮಧು ಎನ್ನುವರ ಮನೆ ಇದೆ ಎಂದರೆ ನನಗೆ ಗೊತ್ತಿಲ್ಲ. ಭೋಗರಾಜ ರವರ ಮನೆಯ ಅಕ್ಕ–ಪಕ್ಕದಲ್ಲಿ ಮನೆಗಳು ಇರುತ್ತವೆ ಎಂದರೆ ಸರಿ. ಚಾಸಾ–27 ಮತ್ತು ಮೃತ ವೇಲು ರವರ ಮನೆಯ ನಡುವೆ ರಸ್ತೆ ಇರುತ್ತದೆ ಎಂದರೆ ಸರಿ. ಚಾಸಾ–27 ಮತ್ತು ಮೃತ ವೇಲು ರವರ ಮನೆಯ ನಡುವೆ 100 ಮೀಟರ್ ಅಂತರ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

5. ಚಾಸಾ–27 ರವರ ಮನೆಯಿಂದ ಮೃತ ವೇಲು ರವರ ಮನೆಗೆ ಹೋಗಬೇಕೆಂದರೆ ಚಾಸಾ–24 ರವರ ಮನೆಯ ಮುಂದಿನಿಂದ ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಮೃತ ವೇಲು ರವರ ಮನೆಯ ಬಳಿ ಹೋದಾಗ ಸುಮಾರು 50 ಜನರು ಸೇರಿರಬಹುದು. ನಾನು ಹೋಗುವ ಮೊದಲು ಮೃತ ವೇಲು ರವರ ಮನೆಯ ಒಳಗೆ ಯಾರು–ಯಾರು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಮನೆಯ ಒಳಗೆ ವೇಲು ಹಾಗೂ ಸತ್ಯ ನಾರಾಯಣ ಇರುವುದಿಲ್ಲ ಎಂದು ಜನರು ಮಾತನಾಡಿಕೊಳ್ಳತ್ತಿದ್ದರು ಹಾಗೂ ಜಾನಕಿಯ ಬಳಿಯೂ ಸಹ ಅವರಿಬ್ಬರೂ ಎಲ್ಲಿ ಹೋದರು ಎಂದು ಕೇಳುತ್ತಿದ್ದರು, ಆಗ ಅದಕ್ಕೆ ಜಾನಕಿಯು ಅವರು ಎಲ್ಲಿ ಹೋದರು ಎಂದು ಗೊತ್ತಿಲ್ಲ ಎಂದು ಹೇಳಿರುತ್ತಾಳೆ. ಸಾಕ್ಷಿಯು ಮುಂದುವರೆದು ಜಾನಕಿ ಸಂಪೂರ್ಣವಾಗಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಜಾನಕಿ ಗಾಯಗೊಂಡಿರುವುದನ್ನು ಹಾಗೂ ಅಶ್ವಿನಿ ಮೃತಪಟ್ಟಿರುವುದನ್ನು ನಾನು ಮೆಯಲ್ಲಿಯೇ ನೋಡಿರುತ್ತೇನೆ.

6. ಚಾಸಾ–27 ರವರು ಕರೆ ಮಾಡಿದ 10 ನಿಮಿಷಕ್ಕೆ ನಾನು ಮೃತ ವೇಲು ಇಲ್ಲನ್ ಗುಡಿಯವರ ಮನೆಯ ಹತ್ತಿರ ಹೋಗಿ ನೋಡಿರುತ್ತೇನೆ. ನಾನು ಹೋದ ಸ್ವಲ್ಪ ಹೊತ್ತಿನಲ್ಲಿಯೇ

ಅಲ್ಲಿಗೆ ಪೊಲೀಸರು ಬಂದಿರುತ್ತಾರೆ. ಮರು ದಿನ ಬೆಳಿಗ್ಗೆ ಜನರಿಂದ ವೇಲು ಇಲ್ಲನ್ ಗುಡಿ ಹಾಗೂ ಸತ್ಯ ನಾರಾಯಣ ಮೂರ್ತಿಯ ಶವ ಎಲ್ಲಿ ಇತ್ತು ಎಂದು ತಿಳಿದು ಬಂತು. ಅವರ ಶವವನ್ನು ಯಾರು ಮೊದಲು ನೋಡಿದರು ಎಂದು ನನಗೆ ಗೊತ್ತಿಲ್ಲ. ನಾನು ವೇಲು ಇಲ್ಲನ್ ಗುಡಿ ಹಾಗೂ ಸತ್ಯ ನಾರಾಯಣ ಮೂರ್ತಿಯ ಶವವನ್ನು ನೋಡಲು ಹೋದಾಗ ಅಲ್ಲಿ ಬಹಳಷ್ಟು ಜನರು ಸೇರಿದ್ದರು. ನಾನು ಆ ದಿನ ಬೆಳಿಗ್ಗೆ ಅಲ್ಲಿಗೆ ಹೋಗುವ ಮೊದಲೇ ಪೊಲೀಸರು ಅಲ್ಲಿ ಇದ್ದರು. ನಾನು ಅಲ್ಲಿಗೆ ಹೋದ ಸರಿಯಾದ ಸಮಯ ನನಗೆ ಹೇಳಲು ಬರುವುದಿಲ್ಲ. ಪೊಲೀಸರು ಯಾವಾಗಿನಿಂದ ಅಲ್ಲಿ ಕುಳಿತುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ.

7. ಆರೋಪಿಯ ಮನೆ ಪೊಲೀಸ್ ಠಾಣೆಯಿಂದ ಸಮೀಪದಲ್ಲಿಯೇ ಇರುತ್ತದೆ ಎಂದರೆ ಸರಿ. ಆರೋಪಿಯನ್ನು ನಾನು ಈ ಮೊದಲೇ ನೋಡಿರುತ್ತೇನೆ, ಆದರೆ ಆತನ ಪರಿಚಯ ಇರುವುದಿಲ್ಲ. ಆರೋಪಿಯನ್ನು ಆತನ ಮನೆಯ ಬಂಧಿಸುವ ಸಮಯದಲ್ಲಿ ಸುಮಾರು ಜನರು ಸೇರಿದ್ದರು ಎಂದರೆ ಸಾಕ್ಷಿಯು ಆತನನ್ನು ಬಂಧಿಸಿದ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋಗಿಲ್ಲ, ಅಲ್ಲಿ ಆರೋಪಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಮರು ಹೇಳಿಕೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ